(ಸಾಕ್ಷಿಯನ್ನು ದಿನಾಂಕಃ 04.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಎಂ ಕೆ ಜೆ ರವರಿಂದ**

ನಾನು ಬಿ ಎ., ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಗ್ರಾಮಕ್ಕೂ ವಾದಿಯ ಗ್ರಾಮಕ್ಕೂ 3-4 ಕಿ ಮೀ ಇದೆ. ವಾದಿಯ ಗಂಡನ ಹೆಸರು ಶಿವಣ್ಣ. ಶಿವಣ್ಣರವರು ಬೆಂಗಳೂರಿನಲ್ಲಿ 10 ವರ್ಷದಿಂದ ವಾಸವಾಗಿರುತ್ತಾರೆ. ಶಿವಣ್ಣ ಮತ್ತು ವಾದಿ ನಮ್ಮ ಗ್ರಾಮದವರೇ ಆಗಿರುತ್ತಾರೆ. ಶಿವಣ್ಣ ಮತ್ತು ವಾದಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಶಿವಣ್ಣ ರವರು ನಿಮಗೆ ಸ್ನೇಹಿತರು ಮತ್ತು ಸಂಬಂಧಿಕರು ಎಂದರೆ ಸರಿಯಲ್ಲ. ಆ ರೀತಿ ನಮಗೆ ಸ್ನೇಹಿತರು ಮತ್ತು ಸಂಬಂಧಿಕರಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮಾತುಕತೆ ಯಾವಾ ದಿನಾಂಕ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿನ ವಿಚಾರವನ್ನು ನಾನೇ ಹೇಳಿರುತ್ತೇನೆ. ರಮೇಶ್ ರವರು ಯಾರ್ಯಾರ ಬಳಿ ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಶಿವಣ್ಣ ಮತ್ತು ವಾದಿ ಆಸ್ತಿ ಖರೀದಿಸುತ್ತಿದ್ದು ಅದಕ್ಕೆ ಸಾಕ್ಷಿಯಾಗಿ ಸಹಿ ಮಾಡುವಂತೆ ಕರೆದಿದ್ದರು ನಾನು ಹೋಗಿರುತ್ತೇನೆ. ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಮಾರುಕಟ್ಟೆಯ ಮೌಲ್ಯ ಕ್ರಯದ ದಿನ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ರಾಜೇಗೌಡನ ಎಲ್ಲೆಯಲ್ಲಿ ಇರುವುದಾಗಿ ವಾದಿ ನನಗೆ ತಿಳಿಸಿರುತ್ತಾರೆ. ಹೊನ್ನಲಗೆರೆ ಹೈವೇ ಹಲಗೂರು ಮದ್ದೂರು ಮುಖ್ಯ ರಸ್ತೆಯಲ್ಲಿ 1 ಗುಂಟೆಗೆ 1 ರಿಂದ 2 ಲಕ್ಷ ಇದೆ ಎಂದರೆ ಸರಿಯಲ್ಲ. ನಾನು ವ್ಯವಸಾಯದ ಜಮೀನನ್ನು ಹೊಂದಿರುತ್ತೇನೆ. ನನ್ನ ಗ್ರಾಮ ಹೊನ್ನಲಗೆರೆ ಗ್ರಾಮಕ್ಕೆ 1 ವರೆ ಕಿ ಮೀ ದೂರದಲ್ಲಿದೆ. ನಮ್ಮ ಗ್ರಾಮದ ಜಮೀನಿನ ಮೌಲ್ಯ ಗುಂಟೆಗೆ 15-20 ಸಾವಿರ ಇರಬಹುದು. ಆ ರಸ್ತೆಯಲ್ಲಿರುವ ಜಮೀನಿನ ಮೌಲ್ಯ 1 ಗುಂಟೆಗೆ 1 ಲಕ್ಷಕ್ಕಿಂತ ಜಾಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ವ್ಯವಹಾರ ಮಾಡುವುದಿಲ್ಲ ನನಗೆ ಮಾರುಕಟ್ಟೆ ಮೌಲ್ಯವೂ ಸಹ ಗೊತ್ತಿರುವುದಿಲ್ಲ.

ಪತ್ರವನ್ನು ಆ ದಿನ ಉಪನೋಂದಣಾ ಕಚೇರಿಯಲ್ಲಿ ಎಷ್ಟು ಗಂಟೆಗೆ ತಯಾರು ಮಾಡಿರುತ್ತಾರೆಂದು ಈಗ ನೆನಪಿರುವುದಿಲ್ಲ. ಅರ್ಜಿಯನ್ನು ಸಲ್ಲಿಸಿದ್ದ 3 ತಿಂಗಳ ಒಳಗೆ 11 ಇ ನಕ್ಷೆಯನ್ನು ತಯಾರಿಸಿ ಕೊಡುತ್ತಾರೆಂದರೆ ಸರಿ. 11 ಇ ನಕ್ಷೆಯನ್ನು ಪ್ರತಿವಾದಿ ಮಾಡಿಸಿದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಕ್ರಯದ ಕರಾರುಪತ್ರ ಆದ ದಿನವೇ ಕ್ರಯಪತ್ರ ಬರೆಸಿಕೊಳ್ಳಲು ವಾದಿ ಸಮಯ ಕೋರಿರುತ್ತಾರೆ. 1 ನೇ ಪ್ರತಿವಾದಿಯ ಮಕ್ಕಳು ಏನು

ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಆ ಸಂದರ್ಭದಲ್ಲಿ 1 ನೇ ವಾದಿಯ ಮಕ್ಕಳು ಸರಕಾರಿ ಶಾಲೆಯಲ್ಲಿ ಓದುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮತ್ತೊಬ್ಬ ಸಾಕ್ಷಿ ಪಿ ಡಬ್ಲೂ-2 ಸಹ ವಾದಿಗೆ ಗೊತ್ತಿರುವ ವ್ಯಕ್ತಿ ಎಂದರೆ ಸರಿ. 1 ನೇ ಪ್ರತಿವಾದಿಯು ಯಾವಾ ಇಸವಿಯಲ್ಲಿ ಮನೆ ಕಟ್ಟಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಸಮಕ್ಷಮದಲ್ಲಿ ಹಣಕಾಸಿನ ವ್ಯವಹಾರ ನಡೆದಿರುತ್ತದೆ. 3 ಲಕ್ಷ ರೂ ಚೆಕ್ ನ ಮೂಲಕವೂ, 1 ಲಕ್ಷ ನಗದಾಗಿ ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಯು 3 ಲಕ್ಷ ರೂಪಾಯಿಯನ್ನು ಚೆಕ್ ಮೂಲಕ ಸಾಲದ ಭದ್ರತೆಗಾಗಿ ಪಡೆದುಕೊಂಡಿರುತ್ತಾರೆ. 1 ಲಕ್ಷ ರೂ ನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಿದ್ದು ಅದನ್ನು ಭದ್ರತೆಗಾಗಿ ನೀಡುವಂತೆ ಕೇಳಿದ್ದು ವಾದಿ ಮತ್ತು ಅವರ ಗಂಡ ಕ್ರಯದ ಕರಾರುಪತ್ರವನ್ನು ವಾದಿಯ ಹೆಸರಿಗೆ ಬರೆದುಕೊಡುವಂತೆ ಸೂಚಿಸಿದ್ದರು ಎಂದರೆ ಸರಿಯಲ್ಲ. 3 ಲಕ್ಷ ಹಣ, 4 ಲಕ್ಷಕ್ಕೆ ದಾಖಲೆ ಮಾಡಿಕೊಟ್ಟಲ್ಲಿ ಮಾತ್ರ ಹಣ ಕೊಡುವುದಾಗಿ ವಾದಿ ತಿಳಿಸಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬೇರೆ ವಿಧಿಯಿಲ್ಲದೇ ವಾದಿಯು ತಿಳಿಸಿದಂತೆ ಕ್ರಯದ ಕರಾರುಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾತ್ರ 1 ನೇ ಪ್ರತಿವಾದಿ ಮತ್ತು ಕುಟುಂಬಕ್ಕೆ ಇದೇ ಆಸ್ತಿ ಇರುವುದು, ಬೇರೆ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಅತ್ಯಂತ ಜಾಸ್ತಿ ಇದ್ದು ಅದನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ವಾದಿಯು ಸೃಷ್ಟಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ 37 ಲಕ್ಷಕ್ಕಿಂತ ಜಾಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಭದ್ರತೆಗಾಗಿ ಬರೆದುಕೊಟ್ಟಿರುವ ಹಣ ರೂ.3 ಲಕ್ಷ ಅದಕ್ಕೆ ಬಡ್ಡಿಯನ್ನು ಕೊಡಲು ಪ್ರತಿವಾದಿಗಳು ತಯಾರಿದ್ದರು ಆ ಬಗ್ಗೆ ನನಗೆ ತಿಳಿಸಿದ್ದರೂ ಸಹ ವಾದಿ ಒಪ್ಪದೇ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಭದ್ರತೆಗಾಗಿ ಮಾಡಿಕೊಟ್ಟ ಕರಾರುಪತ್ರವನ್ನು ಕ್ರಯಪತ್ರ ಬರೆದುಕೊಡಲು ಮಾಡಿಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.